# ಕೃಷಿ ವಿಧೇಯಕ ಪಂಜಾಬ್ ಅಸ್ತು

## ಕೇಂದ್ರದ ಕಾಯ್ದೆ ವಿರುದ್ಧ ಪ್ರತಿ ಕಾಯ್ದೆ

**ಚಂಡಿಗಡ:** ಕೇಂದ್ರ ಸರ್ಕಾರದ 3 ಕೃಷಿ ಕಾಯ್ದೆಗಳಿಗೆ ಪ್ರತಿಯಾಗಿ ಪ್ರತ್ಯೇಕ 3 ಹೊಸ ವಿಧೇಯಕಗಳನ್ನು ಪಂಜಾಬ್ ವಿಧಾನಸಭೆ ಮಂಗಳವಾರ ಅಂಗೀಕರಿಸಿದೆ. ಜತೆಗೆ, ಸತತ 5 ಗಂಟೆಗಳ ಚರ್ಚೆಯ ಬಳಿಕ ಕೇಂದ್ರದ ಕೃಷಿ ಕಾನೂನನ್ನು ವಿರೋಧಿಸುವ ನಿರ್ಣಯಕ್ಕೂ ಅಂಗೀಕಾರ ಪಡೆಯಲಾಗಿದೆ.

ಪ್ರತಿಪಕ್ಷಗಳಾದ ಶಿರೋಮಣಿ ಅಕಾಲಿ ದಳ, ಆಮ್ ಆದ್ಮಿ ಪಕ್ಷ ಹಾಗೂ ಲೋಕ್ ಇನ್ಸಾಫ್ ಪಕ್ಷವು ಈ ಮೂರೂ ವಿಧೇಯಕಗಳು ಹಾಗೂ ನಿರ್ಣಯಕ್ಕೆ ಬೆಂಬಲ ಸೂಚಿಸಿವೆ. ಬಿಜೆಪಿಯ ಇಬ್ಬರು ಶಾಸಕರು ಮಾತ್ರ ಗೈರಾಗಿದ್ದರು.

ರಾಜ್ಯ ಅಂಗೀಕರಿಸಿರುವ ವಿಧೇಯಕದ ಪ್ರಕಾರ, ಯಾರಾದರೂ ಬತ್ತ ಅಥವಾ ಗೋಧಿಯನ್ನು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಗಿಂತ ಕಡಿಮೆ ದರದಲ್ಲಿ ಖರೀದಿಸಿದರೆ ಅಥವಾ ಮಾರಾಟ ಮಾಡಿದರೆ ಅಂಥವರಿಗೆ ಕನಿಷ್ಠ 3 ವರ್ಷ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಕೃಷಿ ಉತ್ಪನ್ನಗಳನ್ನು ಕಳ್ಳದಾಸ್ತಾನು ಮತ್ತು ಕಾಳಸಂತೆಯಲ್ಲಿ ಮಾರಾಟ ಮಾಡುವವರಿಗೂ ಶಿಕ್ಷೆ ಖಚಿತ ಎಂದೂ ವಿಧೇಯಕ ಹೇಳಿದೆ.

**ರಾಜ್ಯಪಾಲರ ಅಂಗೀಕಾರ ಅಗತ್ಯ:** ಕೇಂದ್ರದ ಕಾನೂನಿಗೆ ಪ್ರತಿಯಾಗಿ ರಾಜ್ಯಗಳು ಈ ರೀತಿ ವಿಧೇಯಕಗಳನ್ನು ಅಸೆಂಬ್ಲಿಯಲ್ಲಿ ಅಂಗೀಕರಿಸಿದರೂ, ಅದು ಕಾನೂನಾಗಿ ಪರಿವರ್ತನೆಯಾಗಬೇಕೆಂದರೆ ರಾಜ್ಯಪಾಲರ ಅಂಗೀಕಾರ ಅತ್ಯಗತ್ಯ. ರಾಜ್ಯಪಾಲರು ಒಪ್ಪಿಗೆ ನೀಡದೇ, ಅದನ್ನು ರಾಷ್ಟ್ರಪತಿಗೆ ಕಳುಹಿಸಲು ಅವಕಾಶವಿದೆ. ಈ ಕುರಿತು ಮಾತನಾಡಿರುವ ಸಿಎಂ ಅಮರೀಂದರ್ ಸಿಂಗ್, 'ರಾಜ್ಯಪಾಲರು/ರಾಷ್ಟ್ರಪತಿಗಳು ವಿಧೇಯಕಕ್ಕೆ ಅಂಕಿತ ಹಾಕದಿದ್ದರೆ, ಸರ್ಕಾರವು ಕೋರ್ಟ್ ಮೆಟ್ಟಿಲೇರಿ ಕಾನೂನು ರೀತಿಯ ಹೋರಾಟ ಮಾಡಲಿದೆ' ಎಂದಿದ್ದಾರೆ. 2004ರಲ್ಲಿ ಅಮರೀಂದರ್ ಅವರು ನೆರೆರಾಜ್ಯಗಳ ಜಲ ವಿವಾದಕ್ಕೆ ಸಂಬಂಧಿಸಿದ ಒಪ್ಪಂದದ ವೇಳೆಯೂ ಇದೇ ರೀತಿಯ ಕ್ರಮ ಕೈಗೊಂಡಿದ್ದರು. ಆದರೆ, ಪಂಜಾಬ್ ಸರ್ಕಾರದ ನಡೆ ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ನಂತರ ತೀರ್ಪು ನೀಡಿತ್ತು.

ಇದೇ ವೇಳೆ, ವಿಧೇಯಕ ಅಂಗೀಕಾರದ ಬೆನ್ನಲ್ಲೇ ಪಂಜಾಬ್ ಸಿಎಂ ಅಮರೀಂದರ್ ಸಿಂಗ್ ಅವರು ರಾಜಭವನಕ್ಕೆ ತೆರಳಿ, ವಿಧೇಯಕಕ್ಕೆ ಒಪ್ಪಿಗೆ ನೀಡುವಂತೆ ರಾಜ್ಯಪಾಲರಿಗೆ ಮನವಿ ಮಾಡಿದ್ದಾರೆ. ಇದಕ್ಕೂ ಮುನ್ನ, ರೈತರ ಹಿತಕ್ಕಾಗಿ ನಾನು ರಾಜೀನಾಮೆ ನೀಡಲೂ ಹೆದರುವುದಿಲ್ಲ ಎಂದೂ ಅವರು ಹೇಳಿದ್ದರು.